ಪಿ ಡಬ್ಲುಃ 1

ಸಾಕ್ಷಿಯನ್ನು ದಿನಾಂಕಃ **17-10-2025** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ. ಎಂ ಎಂ ಜೆ., ವಕೀಲರಿಂದಃ**

ನನ್ನ ಸೇವಾ ಪುಸ್ತಕದಲ್ಲಿ ನನ್ನ ಹೆಸರು ಗಣೇಶ ಮಾಸ್ತಿ ಗೌಡ ಎಂದು ನಮೂದಿದೆ ಎಂದರೆ ಸರಿ. ನನ್ನ ಚುನಾವಣಾ ಗುರುತಿನ ಚೀಟಿ, ಆಧಾರ ಕಾರ್ಡ, ಪಡಿತರ ಚೀಟಿಗಳಲ್ಲಿ ನನ್ನ ಹೆಸರು ಗಣೇಶ ಮಾಸ್ತಿ ಗೌಡ ಎಂದು ನಮೂದಿದೆ ಎಂದರೆ ಸರಿ. ಚುನಾವಣಾ ಗುರುತಿನ ಚೀಟಿ, ಆಧಾರ ಕಾರ್ಡ, ಪಡಿತರ ಚೀಟಿಗಳಲ್ಲಿ ಕುಮಟಾ ತಾಲ್ಲೂಕು ವಾಲ್ಗಳ್ಳಿ ಗ್ರಾಮದ ವಿಳಾಸ ಇದೆ. ವಾಲ್ಗಳ್ಳಿ ಯಲ್ಲಿ ಇರುವ ಮನೆಯ ತೆರಿಗೆಯನ್ನು ನನ್ನ ತಮ್ಮ ಶ್ರೀಧರ ಮಾಸ್ತಿ ಗೌಡ ಅವನು ಕೊಡುವುದಿಲ್ಲ. ಶ್ರೀಧರ ಮಾಸ್ತಿ ಗೌಡ ಆತನು ವಾಸ ಇರುವ ಮನೆಯ ತೆರಿಗೆಯನ್ನು ನಾನು ಕಟ್ಟಿದ್ದು ಇರುವುದಿಲ್ಲ. ಶ್ರೀಧರ ಮಾಸ್ತಿ ಗೌಡ ಈತನ ಹೆಸರಿನಲ್ಲೇ ತೆರಿಗೆ ರಶೀದಿ ಬರುತ್ತದೆ. ಶ್ರೀಧರ ಮಾಸ್ತಿ ಗೌಡ ಅವರು ಕಲ್ಲೆ ಪೈಕಿ ಕಲ್ಲೆಕೊಪ್ಪದಲ್ಲಿ ವಾಸ ಮಾಡಿಕೊಂಡು ಬಂದಿದ್ದಾರೆ ಎಂದರೆ ಸರಿ. 1 ರಿಂದ 3 ನೇ ಪ್ರತಿವಾದಿಯರು ದಾವಾ ಸ್ಥಳದಲ್ಲಿ ಕಬ್ಜಾ ಬೋಗವಟೆಯಲ್ಲಿ ಇದ್ದಾರೆ ಎಂದರೆ ಸರಿ. ದಾವಾ ಸ್ಥಳದಲ್ಲಿ ಯಾರ್ಯಾರು ಫಾರ್ಮ ನಂ.7 ತುಂಬಿದ್ದಾರೆ ಎಂದು ನನಗೆ ಹೇಳಲು ಸಾಧ್ಯವಿಲ್ಲ. ಭೂ ನ್ಯಾಯ ಮಂಡಳಿಯವರು ಯಾರ ಪರವಾಗಿ ತೀರ್ಪು ನೀಡಿದ್ದಾರೆ ಎಂದು ನನಗೆ ತಿಳಿದಿದೆ. ಭೂ ನ್ಯಾಯ ಮಂಡಳಿಯವರು ಯಾರಿಗೆ ಫಾರ್ಮ ನಂ.10 ಇದನ್ನು ನೀಡಿದ್ದಾರೆ ಎಂದು ತಿಳಿದಿದೆ. ಅಸ್ಸಿಸ್ಟೆಂಟ್ ಕಮಿಶನರ್ ರವರ ಕೋರ್ಟನಲ್ಲಿ ನನ್ನ ಹಾಗೂ ಪ್ರತಿವಾದಿಯರ ನಡುವೆ ಯಾವುದಾದರೂ ಪ್ರಕರಣ ನಡೆದಿದೆಯೇ ಎಂದು ನನಗೆ ಗೊತ್ತಿಲ್ಲ. ಡಿಸಿಯವರ ಮುಂದೆ ನನ್ನ ಹಾಗೂ ಪ್ರತಿವಾದಿಯರ ನಡುವೆ ಯಾವುದಾದರೂ ಪ್ರಕರಣ ಆದ ಕುರಿತು ನನಗೆ ಮಾಹಿತಿ ಇಲ್ಲ. ದಾವಾ ಜೊತೆಗೆ ನಾನು ಯಾವುದೇ ನಕಾಶೆಯನ್ನು ಹಾಜರು ಮಾಡಿದ್ದು ಇಲ್ಲ. ದಾವೆ ಜೊತೆಗೆ ಲಗತ್ತಿಸುವ ನಕಾಶೆ ತಯಾರು ಮಾಡುವ ಕುರಿತು ನನ್ನ ವಕೀಲರಿಗೆ ನಾನು ಏನೂ ಮಾಹಿತಿ ನೀಡಿದ್ದು ಇಲ್ಲ. ಈ ದಾವೆಯನ್ನು ನನ್ನ ಕುಟುಂಬದ ಆಸ್ತಿಯನ್ನು ವಾಂಟಣಿ ಮಾಡುವ ಕುರಿತು ಈ ದಾವೆಯನ್ನು ಸಲ್ಲಿಸಿದ್ದೇನೆ. ನನ್ನ ಹಾಗೂ ಪ್ರತಿವಾದಿಯರ ನಡುವೆ ಭೂ ನ್ಯಾಯ ಮಂಡಳಿಯ ತೀರ್ಮಾನದ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ಆದ ಬಗ್ಗೆ ನನಗೆ ಮಾಹಿತಿ ಇದೆ. ಆ ಪ್ರಕರಣದ ಪೂರ್ತಿ ದಾಖಲೆಗಳನ್ನು ಈ ನ್ಯಾಯಾಲಯದಲ್ಲಿ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ದಾವಾ ಮಾಡಲು ಕಾರಣ 1981 ರಲ್ಲಿ ದೀಪಾವಳಿ ಹಬ್ಬದ ದಿನ ನಾವು ಎಳನೀರು ತೆಗೆದ ಕಾರಣ 3 ನೇ ಪ್ರತಿವಾದಿ ದೊಣ್ಣೆ ತೆಗೆದುಕೊಂಡು ಬಂದರು. ಅದರ ನಂತರ ದಾವಾ ಮಾಡಲು ದಾವಾಹೇತು 1981 ರಲ್ಲಿ ಪ್ರಾರಂಭವಾಯಿತು. ಈ ಎಲ್ಲಾ ವಿಚಾರಗಳನ್ನು ನಾನು ದಾವೆಯಲ್ಲಿ ನಮೂದು ಮಾಡಿಸಿದ್ದೇನೆ. ದಾವೆಯ ಮುಖ್ಯ ವಿಚಾರಣೆಯ ಅಫಿಡವಿಟ್ ಸಲ್ಲಿಸಲು ನಾನೇ ವಕೀಲರಿಗೆ ಮಾಹಿತಿ ಕೊಟ್ಟಿರುತ್ತೇನೆ.

**(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

**-Sd/-**

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾದಂ..**

**ಹೊನ್ನಾವರ.**